

ಚಾಮುಂಡಿ ಬೆಟ್ಟದ ತುದಿಯಿಂದ ಕಾಣುವ ಮೈಸೂರು ನಗರ

ಸಾಗುವುದನ್ನು ಜನರು ನಿಬ್ಬೆರಗಾಗಿ ನೋಡುತ್ತಿದ್ದರು. ರಾಜರ ಆಳ್ವಿಕೆ ಅಂತ್ಯವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯ ನಂತರ ಸರ್ಕಾರವೇ ದಸರಾ ಆಚರಣೆ ಮುಂದುವರಿಸಿಕೊಂಡು ಬಂದಿದೆ. ರಾಜರ ಬದಲಿಗೆ ಆನೆ ಮೇಲೆ ಚಿನ್ನದ ಅಂಬಾರಿಯಲ್ಲಿ ಚಾಮುಂಡೇಶ್ವರಿ ಪ್ರತಿಷ್ಠಾಪಿಸಿ ಮೆರವಣಿಗೆ ಮಾಡಲಾಗುತ್ತದೆ. ಇಂದಿಗೂ ದಸರಾ ನೋಡಲು ಲಕ್ಷಾಂತರ ಜನರು ಸೇರುತ್ತಾರೆ.

## ನವರಾತ್ರಿ ಪೂಜಾ ವಿಶೇಷ

ನವರಾತ್ರಿಯ ಒಂಬತ್ತು ದಿನಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಿ ಚಾಮುಂಡೇಶ್ವರಿಯನ್ನು ಪೂಜಿಸಲಾಗುತ್ತದೆ. ಮೊದಲ ಮೂರು ದಿನಗಳ ಕಾಲ ಮಹಾಕಾಳಿಯ ಅವತಾರವನ್ನು ಪೂಜಿಸಲಾಗುತ್ತದೆ. ಮಧ್ಯ ಭಾಗದಲ್ಲಿ ಅಂದರೆ ನಾಲ್ಕನೇ ದಿನ ದೇವಿಯ ಮಹಾಲಕ್ಷ್ಮಿ ಸ್ವರೂಪಕ್ಕೆ ಪೂಜೆ ಸಲ್ಲುತ್ತದೆ. ಕೊನೆಯ ಮೂರು ದಿನಗಳಲ್ಲಿ ಸರಸ್ವತಿ ರೂಪದಲ್ಲಿ ಪೂಜಿಸಲಾಗುತ್ತದೆ. ಏಳನೆಯ ದಿನ ಗ್ರಂಥಗಳು, ಲೇಖನ ಸಾಮಗ್ರಿಗಳು ಪೂಜಿಸಲ್ಪಡುತ್ತವೆ. ಎಂಟನೆಯ ದಿನ ದುರ್ಗಾಷ್ಟಮಿಯಂದು ದೇವಿಯ ದುರ್ಗಾ ಸ್ವರೂಪಕ್ಕೆ ಪೂಜೆ ಮಾಡಲಾಗುತ್ತದೆ. ಕೊನೆಯ ದಿನವಾದ ಒಂಬತ್ತನೇ ದಿನ ಮಹಾನವಮಿಯಂದು ಚಂಡಿ ಹೋಮ ನಡೆಸಿ, ಹತ್ತನೇ ದಿನ ಬನ್ನಿವೃಕ್ಷ ಪೂಜಿಸಲಾಗುತ್ತದೆ. ಅಂದಿಗೆ ನವರಾತ್ರಿ ಪೂಜಾ ಕೈಂಕರ್ಯಗಳಿಗೆ ತೆರೆ ಬೀಳುತ್ತದೆ.

ನವರಾತ್ರಿಯಲ್ಲಿ ದುರ್ಗಾ ಪೂಜೆಗೆ ವಿಶೇಷತೆ ಇದೆ. ದುರ್ಗೆಯನ್ನು ಪೂಜಿಸುವ ಮೂಲಕ ದುಷ್ಟ ಸಂಹಾರವಾಗುತ್ತದೆ, ಶಿಷ್ಟರ ಪರಿಪಾಲನೆಯಾಗುತ್ತದೆ ಎಂಬ ನಂಬಿಕೆಯಿದೆ. ಹಾಗಾಗಿ ನವರಾತ್ರಿ ಸಮಯದಲ್ಲಿ ದುರ್ಗೆಯನ್ನು ಪೂಜಿಸುತ್ತಾರೆ. ಚಾಮುಂಡೇಶ್ವರಿ ಬೆಟ್ಟದಲ್ಲಿ ಸಲ್ಲುವ ಪೂಜೆ ಜತೆಗೆ ಮನೆಗಳಲ್ಲೂ ದೇವಿಯ ಸ್ಮರಣೆ, ಪೂಜೆ ಪುನಸ್ಕಾರಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ಮನೆಗಳಲ್ಲಿ ದಸರಾ ಬೊಂಬೆಗಳನ್ನು ಕೂರಿಸುವುದೂ ವಿಶೇಷ.

## ಆಷಾಢ ಮಾಸದ ವಿಶೇಷ

ಆಷಾಢ ಮಾಸದಲ್ಲಿ ಚಾಮುಂಡೇಶ್ವರಿಯ ಆರಾಧನೆ ವಿಜೃಂಭಣೆಯಿಂದ ನಡೆಯುತ್ತದೆ. ಈ ಮಾಸದಲ್ಲಿ ಪ್ರತಿ ಶುಕ್ರವಾರ ಚಾಮುಂಡೇಶ್ವರಿಗೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರುತ್ತವೆ. ರಥೋತ್ಸವ ಸಹ ಇದೇ ಸಂದರ್ಭದಲ್ಲಿ ನಡೆಯುವುದು ಮತ್ತೊಂದು ವಿಶೇಷ. ಆಷಾಢದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಭೇಟಿನೀಡಿ ದೇವಿಯ ದರ್ಶನ ಪಡೆದು ಪೂಜೆ ಸಲ್ಲಿಸುತ್ತಾರೆ. ಮೈಸೂರಿನ ಜನರಷ್ಟೇ ಅಲ್ಲದೆ ವಿವಿಧ ಭಾಗಗಳ ಭಕ್ತರು ಭೇಟಿ ಕೊಡುತ್ತಾರೆ. ಬರುವ ಭಕ್ತರಿಗೆ ಆಡಳಿತ ಮಂಡಳಿಯಿಂದ ಪ್ರಸಾದ ವ್ಯವಸ್ಥೆ ಮಾಡಲಾಗುತ್ತದೆ. ಅಷ್ಟೇ ಪ್ರಮಾಣದಲ್ಲಿ ಮೈಸೂರು ನಗರದ ಭಕ್ತರೂ ಪ್ರಸಾದ ವ್ಯವಸ್ಥೆ ಕಲ್ಪಿಸುತ್ತಾರೆ. ಬಂದ ಭಕ್ತರಿಗೆ ಊಟೋಪಚಾರ ನೀಡಿ ಸತ್ಕರಿಸುವ ಸಂಪ್ರದಾಯ ನಡೆದುಕೊಂಡು ಬಂದಿದೆ.

ಆಷಾಢ ಮಾಸದಲ್ಲಿ ಬರುವ ನಾಲ್ಕು ಶುಕ್ರವಾರಗಳಂದು ಒಮ್ಮೆಲೆ ಸಾವಿರಾರು ಜನರು ಬರುವುದರಿಂದ ಬೆಟ್ಟದಲ್ಲಿ ನಿಲ್ಲಲೂ ಸ್ಥಳಾವಕಾಶ ಸಿಗುವುದಿಲ್ಲ. ಜನ, ವಾಹನ ದಟ್ಟಣೆಯಿಂದ ಕೂಡಿರುತ್ತದೆ. ಇತ್ತೀಚಿನ ದಿನಗಳಲ್ಲಿ ವಾಹನ ದಟ್ಟಣೆಯನ್ನು ಗಮನಿಸಿ ಆ ನಾಲ್ಕು ಶುಕ್ರವಾರ ಬೆಟ್ಟಕ್ಕೆ

## ಜಯಲಲಿತಾ ಭೇಟಿ

ಚಾಮುಂಡಿ ಬೆಟ್ಟಕ್ಕೂ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಅವರಿಗೂ ಬಹಳ ಹಿಂದಿನ ನಂಟು. ಜಯಲಲಿತಾ ಅವರು ನಿಯಮಿತವಾಗಿ ಮೈಸೂರಿಗೆ ಭೇಟಿ ನೀಡಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸುತ್ತಾರೆ. ತಮಿಳುನಾಡು ವಿಧಾನಸಭೆ ಚುನಾವಣೆಗೆ ಮುನ್ನ ಹಾಗೂ ಚುನಾವಣೆಯಲ್ಲಿ ಜಯ ಗಳಿಸಿದ ನಂತರ ಆಗಮಿಸಿ ದೇವಿಯ ದರ್ಶನ ಪಡೆಯುವುದು ಪ್ರತಿ ಸಲವೂ ನಡೆದಿದೆ. ಉಳಿದ ಸಮಯದಲ್ಲಿ ವರ್ಷಕ್ಕೆ ಒಮ್ಮೆಯಾದರೂ ಬಂದು ಪೂಜೆ ಸಲ್ಲಿಸಿ, ದೇವಿಯ ಆಶೀರ್ವಾದ ಪಡೆಯುತ್ತಾರೆ.

ಆದರೆ ಇತ್ತೀಚಿನ ಕೆಲ ವರ್ಷಗಳಿಂದ ಅವರ ಭೇಟಿ ಕಡಿಮೆಯಾಗಿದೆ ಎನ್ನುವುದೂ ಕುತೂಹಲಕರ. ಮೈಸೂರಿಗೆ ಭೇಟಿ ನೀಡುವ ರಾಜಕಾರಣಿಗಳು, ಅಧಿಕಾರಿಗಳು, ಉದ್ಯಮಿಗಳು, ಚಲನಚಿತ್ರ ನಟ-ನಟಿಯರು, ಸಮಾಜದ ಪ್ರಮುಖರು ಬೆಟ್ಟದ ಮೇಲೇರಿ ದುರ್ಗೆಯ ದರ್ಶನ ಪಡೆಯುವುದು ಸಾಮಾನ್ಯ ದೃಶ್ಯ.